ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ
**Bangalore Development Authority**

ಸಂಖ್ಯೆ :
No.

ಬೆಂಅಪ್ರಾ/ನಯೋಸ/ CLU-239/13-14/742/2014-15.

ದಿನಾಂಕ : 20/5/14
Date :

# ಪ್ರಾರಂಭಿಕ ದೃಢೀಕರಣ ಪತ್ರ

ವಿಷಯ: ಬೆಂಗಳೂರು ಉತ್ತರ ತಾಲ್ಲೂಕು, ಯಲಹಂಕ ಹೋಬಳಿ, ಬ್ಯಾಟರಾಯನಪುರ ಗ್ರಾಮದ ಸರ್ವೆ ನಂ. 66/1 ರಲ್ಲಿನ 3136.28 ಚ.ಮೀ. ವಿಸ್ತೀರ್ಣದ ಪ್ರದೇಶವನ್ನು ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರ ಕಲಂ 14-ಎ [3] ರಂತೆ ಕೈಗಾರಿಕೆ ಉಪಯೋಗದಿಂದ ವಸತಿ ಉಪಯೋಗಕ್ಕೆ ಭೂ-ಉಪಯೋಗ ಬದಲಾವಣೆಯನ್ನು ಮೆ: ಹೊಯ್ಸಳ ಪ್ರಾಜೆಕ್ಟ್ಸ್ ಪ್ರೈ. ಲಿ. ರವರ ಪರವಾಗಿ ಅನುಮೋದಿಸುವ ಕುರಿತು.

ಉಲ್ಲೇಖ:
1. ತಮ್ಮ ಅರ್ಜಿ ದಿನಾಂಕ 26.12.2013.
2. ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರ ಕಲಂ 14-ಎ Sub section [3] ರಂತೆ ಕ್ರಮ ವಹಿಸಿರುವುದು.
3. ಈ ಕಛೇರಿಯ ಪತ್ರ ಸಂಖ್ಯೆ ಬೆಂಅಪ್ರಾ/ನಯೋಸ/CLU-239/85/2014-15, ದಿನಾಂಕ 03.04.2014 ರಲ್ಲಿ ಭೂ ಉಪಯೋಗ ಬದಲಾವಣೆ ಸಂಬಂದ ಅರ್ಜಿದಾರರಿಗೆ ₹. 1,41,800/- ಗಳನ್ನು ಪಾವತಿಸಲು ತಿಳಿಸಿರುವುದು.
4. ಅರ್ಜಿದಾರರು ದಿನಾಂಕ 05.04.2014 ರಂದು ಕೆನರಾ ಬ್ಯಾಂಕ್ ನ ಚಲನ್ ನಂ. 23848 ರ ಮೂಲಕ ₹. 1,41,800/- ಗಳನ್ನು ಪ್ರಾಧಿಕಾರಕ್ಕೆ ಸಂದಾಯ ಮಾಡಿದ್ದು, ಇದನ್ನು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಆರ್ಥಿಕ ವಿಭಾಗದವರು ದಿನಾಂಕ 22.04.2014 ರಂದು ಹಣ ಸಂದಾಯವಾದ ಬಗ್ಗೆ ದೃಢೀಕರಿಸಿರುವುದು.

ಉಲ್ಲೇಖ[1] ರಲ್ಲಿನ ಅರ್ಜಿಯಲ್ಲಿ ಬೆಂಗಳೂರು ಉತ್ತರ ತಾಲ್ಲೂಕು, ಯಲಹಂಕ ಹೋಬಳಿ, ಬ್ಯಾಟರಾಯನಪುರ ಗ್ರಾಮದ ಸರ್ವೆ ನಂ. 66/1 ರಲ್ಲಿನ 3136.28 ಚ.ಮೀ. ವಿಸ್ತೀರ್ಣದ ಪ್ರದೇಶವನ್ನು ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರ ಕಲಂ 14-ಎ [3] ರಂತೆ ಕೈಗಾರಿಕೆ ಉಪಯೋಗದಿಂದ ವಸತಿ ಉಪಯೋಗಕ್ಕೆ ಭೂ-ಉಪಯೋಗ ಬದಲಾವಣೆ ಕೋರಲಾಗಿರುತ್ತದೆ. ಈ ಸಂಬಂಧ ಉಲ್ಲೇಖ [2] ರಲ್ಲಿ ಅವಕಾಶ ಕಲ್ಪಿಸಿ ರುವಂತೆ ಉಲ್ಲೇಖ [3] ರಲ್ಲಿ ಒಟ್ಟು ಮೊತ್ತ ₹. 1,41,800/- [₹. ಒಂದು ಲಕ್ಷದ ನಲವತ್ತೊಂದು ಸಾವಿರದ ಎಂಟುನೂರು ಮಾತ್ರ] ಗಳನ್ನು ಸಂದಾಯ ಮಾಡುವಂತೆ ತಿಳಿಸಿದ್ದು, ಉಲ್ಲೇಖ [4] ರಲ್ಲಿ ₹. 1,41,800/- [₹. ಒಂದು ಲಕ್ಷದ ನಲವತ್ತೊಂದು ಸಾವಿರದ ಎಂಟುನೂರು ಮಾತ್ರ] ಗಳನ್ನು ಪ್ರಾಧಿಕಾರಕ್ಕೆ ಸಂದಾಯ ಮಾಡಲಾಗಿದೆ. ಇದನ್ನು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಆರ್ಥಿಕ ವಿಭಾಗದವರು ದಿನಾಂಕ 22.04.2014 ರಂದು ಹಣ ಸಂದಾಯವಾದ ಬಗ್ಗೆ ದೃಡೀಕರಿಸಿರುತ್ತಾರೆ.

ಟಿ. ಚೌಡಯ್ಯ ರಸ್ತೆ, ಕುಮಾರಪಾರ್ಕ್ ಪಶ್ಚಿಮ, ಬೆಂಗಳೂರು 560 020
T. Chowdaiah Road, Kumarapark West, Bangalore 560 020, Facsimile : 2334 5799, Website : www.bdabangalore.org

ಆದುದರಿಂದ ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರ ಸೆಕ್ಷನ್ 14-ಎ Sub-section [3] ರಂತೆ [Deemed permission] ಅಡಿಯಲ್ಲಿ ಬೆಂಗಳೂರು ಉತ್ತರ ತಾಲ್ಲೂಕು, ಯಲಹಂಕ ಹೋಬಳಿ, ಬ್ಯಾಟರಾಯನಪುರ ಗ್ರಾಮದ ಸರ್ವೆ ನಂ. 66/1 ರಲ್ಲಿನ 3136.28 ಚ.ಮೀ. ವಿಸ್ತೀರ್ಣದ ಪ್ರದೇಶವನ್ನು ಕೈಗಾರಿಕೆ ಉಪಯೋಗದಿಂದ ವಸತಿ ಉಪಯೋಗಕ್ಕೆ ಭೂ ಉಪಯೋಗ ಬದಲಾವಣೆಯನ್ನು ಮೆ: ಹೊಯ್ಸಳ ಪ್ರಾಜೆಕ್ಟ್ಸ್ ಪ್ರೈ. ಲಿ. ರವರ ಪರವಾಗಿ ಈ ಕೆಳಕಂಡ ನಿಭಂದನೆಗಳಿಗೊಳಪಡಿಸಿ ಭೂ ಉಪಯೋಗ ಬದಲಾವಣೆ ಆದೇಶ ನೀಡಲಾಗಿದೆ.

1. ಪ್ರಶ್ನಿತ ಪ್ರದೇಶದ ಬಡಾವಣೆ / ಕಟ್ಟಡ ನಕ್ಷೆಯನ್ನು ಸಕ್ಷಮ ಪ್ರಾಧಿಕಾರದಿಂದ ವಲಯ ನಿಯಮಾವಳಿ ಅನುಸಾರ ಮಂಜೂರು ಮಾಡಿಸಿಕೊಳ್ಳುವುದು.
2. ಪ್ರಸ್ತಾಪಿತ ಜಮೀನಿನ ಸಂಬಂಧವಾಗಿ ತಪ್ಪು ಮಾಹಿತಿ / ದಾಖಲಾತಿಗಳನ್ನು ನೀಡಿದ್ದಲ್ಲಿ ಅರ್ಜಿದಾರರೇ ಹೊಣೆಗಾರರಾಗುವುದಲ್ಲದೇ ಭೂ ಉಪಯೋಗದ ಆದೇಶ ತನ್ನಿಂತಾನಾಗಿಯೇ ರದ್ದಾಗುತ್ತದೆಂದು ತಿಳಿಯುವುದು.
3. ಅಗತ್ಯಕ್ಕನುಗುಣವಾಗಿ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯ ನಿರಾಕ್ಷೇಪಣಾ ಪತ್ರ ಪಡೆಯುವುದು ಹಾಗೂ ಅದರಲ್ಲಿನ ಷರತ್ತುಗಳನ್ನು ಪಾಲಿಸತಕ್ಕದ್ದು. ಹಾಗೂ ಮಳೆ ನೀರು ಕೊಯ್ಲು" ವ್ಯವಸ್ಥೆಯನ್ನು ಕಡ್ಡಾಯವಾಗಿ ಅಳವಡಿಸತಕ್ಕದ್ದು.
4. ಕಟ್ಟಡದ ಕಾಮಗಾರಿಯನ್ನು ಪ್ರಾರಂಭಿಸುವ ಮೊದಲು ಸಕ್ಷಮ ಪ್ರಾಧಿಕಾರದಿಂದ ಕಟ್ಟಡ ನಕ್ಷೆ ಅನುಮೋದನೆಯನ್ನು ಪಡೆದುಕೊಳ್ಳತಕ್ಕದ್ದು.
5. ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ / ಸಕ್ಷಮ ಪ್ರಾಧಿಕಾರ ವಿಧಿಸುವ ಇನ್ನಿತರೆ ನಿಬಂಧನೆಗಳನ್ನು ಪಾಲಿಸತಕ್ಕದ್ದು.

[ಕರಡು ಪತ್ರ ಆಯುಕ್ತರವರಿಂದ
ಅನುಮೋದಿಸಲ್ಪಟ್ಟಿದೆ]

2015

ಆಯುಕ್ತರ ಪರವಾಗಿ,
ಬೆಂಅಪ್ರಾ, ಬೆಂಗಳೂರು

ಇವರಿಗೆ

ಮೆ: ಹೋಯ್ಸಳ ಪ್ರಾಜೆಕ್ಟ್ಸ್ ಪ್ರೈ. ಲಿ.,
# 104, ನೆಲಮಹಡಿ, ಇನ್ ಫೆಂಟ್ರಿ ರಸ್ತೆ,
ಬೆಂಗಳೂರು 560 001.